ನೀವು ಇಲ್ಲಿ ಹೇಳುತ್ತೀರಿ. ವಿಚಾರಣೆ ಮಾಡಬೇಕೆಂದು ಆದರೆ ಅಲ್ಲಿ ಆರ್ಡರ್ಸ್ ಇಷ್ಯು ಮಾಡಿದರೆ.....

ಶ್ರೀ ಎಂ ವೀರಪ್ಪ ಮೊಯಿಲಿ : ಆಯಿತು ವಿಚಾರಣೆ ಮಾಡಿಸುವವರೆಗೆ ಆರ್ಡರ್ಸ್ ಇಷ್ಯು ಮಾಡಿಸುವುದಿಲ್ಲ.

ವಿಷಯ: ಕರ್ನಾಟಕ ವಿದ್ಯುತ್‌ಮಂಡಳಿಯ ಅಧ್ಯಕ್ಷರ ಆದೇಶದಿಂದ ವಿಮಾನ ನಿಲ್ದಾಣದಲ್ಲಿ ವಿದ್ಯುತ್ ನಿಲುಗಡೆಯಾಗಿದ್ದ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಭಾದ್ಯಕ್ಷಿಣಿಯವರೇ ನಾನು ತಮಗೆ ಒಂದು ಪತ್ರ ಬರೆದಿದ್ದೇನೆ ಕರ್ನಾಟಕ ವಿದ್ಯುಚಕ್ತಿ ಮಂಡಳಿಯ ಆಡಳಿತದ ಬಗ್ಗೆ ಚರ್ಚೆ ಮಾಡುವಾಗ ನಾನು ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಆ ವಿದ್ಯುಚಕ್ತಿ ಮಂಡಳಿಯ ಅಧ್ಯಕ್ಷರು ಏನು ಹಿಟ್ಟರೋ ಅಥವಾ ಕರ್ನಾಟಕ ಸರ್ಕಾರದ ಅಧೀನ ಅಥವಾ ವ್ಯಾಪ್ತಿಯಲ್ಲಿದ್ದಾರೋ ಎಂಬುದನ್ನು ತಿಳಿಸಬೇಕು. ಇಂದಿನ ಪತ್ರಿಕೆಗಳಲ್ಲಿ ಒಂದು ವರದಿ ಬಂದಿದೆ. "ವಿಮಾನ ನಿಲ್ದಾಣಕ್ಕೆ ವಿದ್ಯುತ್‌ಕಟ್ ಅಂದು ನಾನು ಇದನ್ನು ಹೇಳಿದಾಗ ಸರ್ಕಾರ ಬಹಳ ಲಘುವಾಗಿ ತೆಗೆದುಕೊಂಡರು. ಅಂದರೆ ಇಂದು ಮಂಡಲಿಯ ಅಧ್ಯಕ್ಷರ ಸಿಟ್ಟಿನ ಆದೇಶದಿಂದ ವಿಮಾನ ನಿಲ್ದಾಣದಲ್ಲಿ ಸುಮಾರು ಎರಡೂವರೆ ಗಂಟೆಗಿಂತ ಹೆಚ್ಚು ಕಾಲ ವಿದ್ಯುತ್ ಇಲ್ಲದೆ ವಿಮಾನಗಳ ಪ್ರಯಾಣಕ್ಕೂ ತೊಂದರೆ, ಹಾಗೂ ವಿಮಾನದಲ್ಲಿ ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೂ ಆಗಿರತಕ್ಕ ತೊಂದರೆಯನ್ನು ನಾನು ತಮ್ಮ ಮೂಲಕ ಈ ಸದನದ ಮತ್ತು ಸಂಬಂಧಪಟ್ಟ ಇಲಾಖೆ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಸೆಪ್ಟೆಂಬರ್ 26 ನೇ ತಾರೀಖು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರಾದ ಶ್ರೀ ನರಸಿಂಹಮೂರ್ತಿಯವರು ವಿದೇಶಕ್ಕೆ ಹೊರಟಿದ್ದರು. ನನಗೆ ನಿಖರವಾಗಿ ಗೊತ್ತಿಲ್ಲ. ಅವರನ್ನು ಕಳುಹಿಸುವುದಕ್ಕೆ 30 ಜನ ಹೋದಾಗ ಇವರು ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಎಂಬ ಕಾರಣಕ್ಕಾಗಿ ಆ 30 ಜನಕ್ಕೆ ಟಿಕೆಟ್ ಇಲ್ಲದೆ ಉಚಿತವಾಗಿ ಒಳಗಡೆ ಬಿಡಬೇಕು. ಅವರು ಒಂದು ದಿವಸಕ್ಕೆ ನನಗೆ ಗೊತ್ತಿರುವ ಹಾಗೆ $\frac{1}{2}$ ಯಿಂದ 13 ಸಾವಿರದವರೆಗೆ ವಸೂಲು ಮಾಡಬೇಕಾಗುತ್ತದೆ. ಅವರಿಗೆ ಕಂಟ್ರಾಕ್ಟ್ ತೆಗೆದುಕೊಂಡಿರುವವರು ಬದುಕಬೇಕಾದರೆ ಇವರನ್ನು ಬಿಡಲಿಲ್ಲವೆಂದು ಹೇಳಿ ಸಿಟ್ಟಿನ ಒಂದು ಆದೇಶ ವಿದ್ಯುಚ್ಛಕ್ತಿ ನಿಲ್ಲಿಸಿಬಿಡಿ ಎಂದು ನಾನು ಅದಕ್ಕೆ ಬೇಕಾದ ದಾಖಲೆಗಳನ್ನು ನಿಮಗೆ ಸಮಯ ಸಂದರ್ಭ ಬಂದಾಗ ಒದಗಿಸಲು ಪ್ರಯತ್ನ ಮಾಡುತ್ತೇನೆ. ಏನು ಹೇಳುತ್ತಾರೆ, ಕಳೆದ ಗುರುವಾರ ಈ ಸಭೆ ಸ್ಟೇಷನ್‌ವ್ಯಾಪ್ತಿಯಲ್ಲಿ ಬೆಳಿಗ್ಗೆ 10-30 ರಿಂದ ದುರಸ್ತಿ ಕಾರ್ಯ ಆರಂಭಿಸಲಾಗಿದೆ ವಿದ್ಯುಚ್ಛಕ್ತಿ ಕೆಡುತ್ತದೆ ದುರಸ್ತಿಯಾಗಬೇಕು. ಆದರೆ ದುರಸ್ತಿ ಕಾರ್ಯವನ್ನು ಸಬ್‌ಸ್ಟೇಷನ್ ನಿನ ಶಿಫ್ಟ್ ಇಂಜಿನಿಯರ್ ಈಶ್ವರಪ್ಪ ಬಸರ್ಗಿಯವರಿಂದ ಮುರುಗೇಶಪಾಳ್ಯದ ಸಹಾಯಕ ಇಂಜಿನಿಯರ್ ಸೋಲಂಕಿಯವರಿಂದ ವಹಿಸಿಕೊಂಡರು. ಆ ಕೆಲಸ 1.20 ರ ಹೊತ್ತಿಗೆ ಮುಗಿಯಿತು. ವಿದ್ಯುತ್ ಸರಬರಾಜನ್ನು ಮತ್ತೆ ಆರಂಭಿಸಲು ಆ ಸಮಯಕ್ಕೆ ಈ ಪ್ರಕರಣ ನಡೆಯುತ್ತದೆ. ಮಂಡಲಿಯ ಅಧ್ಯಕ್ಷರು ಅಲ್ಲಿಗೆ ಹೋಗುತ್ತಾರೆ. ಅವರನ್ನು ಕಳಿಸುವುದಕ್ಕೆ ಬಂದಿರುವ ಜನರನ್ನು ಒಳಗೆ ಬಿಡಲಿಲ್ಲ. ಅದ್ದರಿಂದ ವಿದ್ಯುಚ್ಛಕ್ತಿ ನಿಲ್ಲಿಸುತ್ತಾರೆ, ಇವೆಲ್ಲವನ್ನು ಲಾಗ್‌ಪುಸ್ತಕದಲ್ಲಿ ಆಯಾಯ ಹೊತ್ತಿಗೆ ಸರಿಯಾಗಿ ದಾಖಲೆ ಮಾಡಿದ್ದಾರೆ. ಮಂತ್ರಿಗಳು ಸಂಬಂಧ ಪಟ್ಟ ಇಂಜಿನಿಯರ್ ಆ ದಾಖಲೆಗಳನ್ನು ಈ ಸದನಕ್ಕೆ ಕೊಟ್ಟರೆ, ದಾಖಲೆಗಳನ್ನು

ನೋಡಬಹುದು. ಈಗ ನಾನು ಆ ದಾಖಲೆಗಳ ವಿವರಕ್ಕೆ ಹೋಗುವುದಿಲ್ಲ. ಆದರೆ 1.20ಕ್ಕೆ ಲೈನ್ ಸಿಪ್ಪವಿದ್ದರೂ ಕೂಡ 4.30 ರವರೆಗೆ ವಿದ್ಯುಚ್ಛಕ್ತಿ ಪೂರೈಸದೇ ಇರುವುದಕ್ಕೆ ಕಾರಣವೇನು? ಇವರು ಕೊಡುವ ಕಾರಣ ಲೈನ್ ಜಂಪ್ ಆಯಿತು ಎಂದು. ಲೈನ್ ಜಂಪ್ ಹಾಕಬೇಕು ಇದು ತಾಂತ್ರಿಕವಾದುದು. ಇದು ಟೆಕ್ನಿಕಲ್ I don't go into the technical details of the matter. ಲೈನ್ ಜಂಪ್ ಹಾಕಬೇಕೋ ಏನೋ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ : ಜಂಪ್ ಎಂದರೆ ಎರಡು ಮೂರು ವೈರ್‌ಗಳು ಕಂಬದಲ್ಲಿ ಬರುತ್ತಿರುತ್ತವೆ. ಆ ವೈರನ್ನು ತೆಗೆದು ಕೆಳಗಡೆಯಿಂದ ಅಥವಾ ಮೇಲುಗಡೆಯಿಂದ ತಂದು ಕನೆಕ್ಷನ್‌ಅನ್ನು ಕೊಡುತ್ತಾರೆ. ಅದನ್ನು ಜಂಪ್ ಎಂದು ಕರೆಯುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ಹಾಕುವುದಕ್ಕೆ ಎನ್ನುವ ಕಾರಣ ಕೊಡುತ್ತಾರೆ ಆ ಕಾರಣಕ್ಕಾಗಿ ಮೊದಲು ಆದೇಶವನ್ನು ಕೊಡುತ್ತಾರೆ. ಆದೇಶವನ್ನು ಕೊಟ್ಟಿದ್ದುದು ಬರವಣಿಗೆ ಲಿಕ್ಕದ ಲಾಗ್ ಬುಕ್‌ನಲ್ಲಿ, 1 ಗಂಟೆ 10 ನಿಮಿಷಕ್ಕೆ ಸರಿಯಾಯಿತು ಎಂಬ ಆದೇಶ ಲಾಗ್ ಬುಕ್‌ನಲ್ಲಿದೆ. ಸಂಬಂದಪಟ್ಟ ಇಲಾಖೆಯ ಇಂಜಿನಿಯರ್ ಅದನ್ನು ಬರೆಯುತ್ತಾರೆ. ಅದು ಆಮೇಲೆ ಕೋಪದಲ್ಲಿ ಅವರು ಎಷ್ಟು ಕೂಗಾಡಿದರು ಎನ್ನತಕ್ಕಂಥದನ್ನು ಏರ್‌ಪೋರ್ಟ್‌ಗೆ ಹೋಗಿದ್ದವರು, ಅಲ್ಲಿದ್ದವರೆಲ್ಲಾ ಕೇಳಿದ್ದಾರೆ. ಲೈನನ್ನು ಕಿತ್ತು ಹಾಕು ಇವರು ಏನು ಮಾಡುತ್ತಾರೋ ನೋಡೋಣ ಈ ರೀತಿಯ ಒಂದು ದರ್ಬಾರಿನ ಆದೇಶವನ್ನು ಬಿಟ್ಟರು. ಅವರು ತೆಗೆದರು, ಈ ಆದೇಶವನ್ನು ಇವರು ತಮ್ಮ ವಿದ್ಯುಚ್ಛಕ್ತಿ ಇಲಾಖೆಯ ಸೋಲಂಕಿ ಅವರಿಗೂ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಅವರಿಗೂ ವಿಚಾರವನ್ನು ತಿಳಿಸಬೇಕೆಂದು ವಿದ್ಯುಚ್ಛಕ್ತಿಯ ಅಧ್ಯಕ್ಷರು ಮಾಡಿದ ಸೂಚನೆಯನ್ನು ಸೋಮಶೇಕರಪ್ಪ (PRO of the K.E.B.) ಎನ್ನತಕ್ಕಂಥವರು ದೂರವಾಣಿಯಲ್ಲಿ ತಿಳಿಸುವುದು. ಎರಡು ಗಂಟೆ ಎರಡೂವರೆ ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ನಿಲ್ಲಿಸುವುದು. ವಿದ್ಯುಚ್ಛಕ್ತಿ ಇಲಾಖೆಯ ಇಂದಿಯನ್ ಎಲೆಕ್ಟ್ರಿಸಿಟಿ ಆಕ್ಟ್‌ನಲ್ಲಿ ಇಂಥ ಆದೇಶವನ್ನು ಕೊಟ್ಟರೆ ಪೆನಾಲ್ಟಿ ಕೂಡಾ ಸೆಕ್ಷನ್ 40 ರಲ್ಲಿ ಫಿಕ್ಸ್ ಮಾಡಬಹುದು I quote Section 40 which reads thus " PENALTY FOR MALICIOUSLY WASTING THE ENERGY OR INJURING WORKS" Whoever maliciously causes energy to be wasted or diverted or with an intent to cut off supply of the energy cuts or injures, or attempts to cut or injures any electrical supply line or works, shall be punishable with imprisonment for a term which may extend upto two years or with fine which may extend to Rs 1,000/- or with both". ನಾನು ಇಲ್ಲಿ ಕೇಳುತ್ತೇನೆ. ಈ ಕಾಯ್ದೆಯ ಪ್ರಕಾರ ಯಾರು ಶಾಸನಬಾಹಿರವಾದಂಥ ಇಂಥ ನಿರ್ದೇಶನವನ್ನು ಕೊಟ್ಟಿರುವುದು ನಿಜ ಎಂದಾದರೆ ಸರ್ಕಾರ ಏನಾದರೂ ಒಂದು ಹೇಳಿಕೆಯನ್ನು ಮಾಡುತ್ತದೆಯೋ ಇಲ್ಲ ಎಂಬುದನ್ನು ತಿಳಿಸಬೇಕು. ನನಗೆ ಮತ್ತೆ ಯಾರಾದರೂ ಕೆ.ಇ.ಬಿ. ಇಲಾಖೆಗೆ ಸಂಬಂಧಪಟ್ಟ ಹೆಂಗಸರು ಹೆಣ್ಣುಮಕ್ಕಳು ಗೌರವಾನ್ವಿತ ಗಂಡಂದಿರಿಂದ ನಮಗೆ ಏನಾದರೂ ಮತ್ತೆ ಇಂಥ ಭಯಭೀತಿ ಇರತಕ್ಕಂಥ ಪತ್ರಗಳು ಮತ್ತು ಪತ್ರಿಕೆಗಳಲ್ಲಿ ಪ್ರಸಿದ್ಧಿಗಳು ಬರುವುದಕ್ಕೆ ಅವಕಾಶವನ್ನು ಕೊಡುತ್ತೀರೋ ಇಲ್ಲ ತಾವು ಒಂದು ಹೇಳಿಕೆಯನ್ನು

ಅವರು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಜೆ ಒಳಗೆ ಹೇಳಿಕೆಯನ್ನು ಕೊಡುತ್ತೇವೆ.

ವಿಷಯ: ಗುಲ್ಬರ್ಗಾ ಜಿಲ್ಲಾಪರಿಷತ್ತಿನ ಸದಸ್ಯರ ಕೊಲೆಯಾಗಿರುವ ಬಗ್ಗೆ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯ ಅವ್ಯವಹಾರಗಳು

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾದ್ಯಕ್ಷೆಯವರೆ ನಾನು ಈ ಸದನದ ಅವಧಿಯಲ್ಲಿ ಎರಡು ವಿಚಾರಗಳಲ್ಲಿ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ.

ಒಂದು ಗುಲ್ಬರ್ಗಾದಲ್ಲಿ ನಮ್ಮ ಪಕ್ಷದ ಪರಿಷತ್ತಿನ ಸದಸ್ಯರಾದ.....

ಉಪಾದ್ಯಕ್ಷೆಯವರು : ತಾವು ಕಾಲಿಂಗ್ ಅಟೆನ್‌ಷನ್‌ನನ್ನು ಹಾಕಿದ್ದೀರಿ. ಆದರೆ ಇವತ್ತು ಯಾವುದೂ ಕಾಲಿಂಗ್ ಅಟೆನ್‌ಷನ್ ಇಲ್ಲ. ಇವತ್ತು ಬಿಸಿನೆಸ್‌ಗೆ ಹಾಕಿಲ್ಲ.

ಶ್ರೀ ಸಿ. ಬೈರೇಗೌಡ : ನಾನು ಕಳುಹಿಸಿದ್ದೇನೆ. ನನಗೆ ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಅವಕಾಶ ಇಲ್ಲಿ ಸಿಗಲಿಲ್ಲ. ಇವತ್ತು ಅಲ್ಲಿ ಏನಾಗಿದೆ ಎಂದರೆ....

ಉಪಾದ್ಯಕ್ಷೆಯವರು : ಇವತ್ತು ಕಾಲಿಂಗ್ ಅಟೆನ್‌ಷನ್ನು ಹಾಕಿದ್ದೀರಿ. ಅದು ನಾಳೆ ಬರಬಹುದು. ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ : ಅದನ್ನು ನಾನು ಪ್ರಾರಂಭದಲ್ಲಿಯೇ ಕಳುಹಿಸಿರತಕ್ಕಂಥದ್ದು. ಅಲ್ಲಿ ಯಾರು ಅಪರಾಧವನ್ನು ಮಾಡಿರತಕ್ಕಂಥದು ಅಪಾರಾಧಿಗಳು ಯಾರು ಎನ್ನುತಕ್ಕಂಥದ್ದು ಕೂಡಾ.....

ಉಪಾದ್ಯಕ್ಷೆಯವರು : ಸಂಬಂಧಪಟ್ಟ ಮಂತ್ರಿಗಳೂ ಇಲ್ಲ.

ಶ್ರೀ ಸಿ. ಬೈರೇಗೌಡ : ಕಣ್ಣಾರೆ ಕಂಡಿರತಕ್ಕಂಥವರು ಕೂಡಾ ಹೇಳಿದ್ದಾರೆ. ಅವರು ಉಪಯೋಗಿಸಿರುರ ಜೀಪು ಕೂಡಾ ಯಾವುದು ಎನ್ನತಕ್ಕಂಥದ್ದು ಆ ಜೀಪಿನ ನಂಬರ್ ಅದನ್ನು ತಿಳಿಸಿದ್ದಾರೆ. ಮತ್ತೆ ಅಪರಾಧಿಗಳು ಯಾರು ಎಂಬುದನ್ನು ಎಂದು ಹೇಳಿದ್ದಾರೆ. ಈಗ ಆ ಜೀಪ್ ಏನಾಗಿದೆ, ಇದು ಕೊಲೆಯಾದ ಮೇಲೆ ಆ ಜೀಪನ್ನು ಮಾಲೀಕತ್ವವನ್ನೇ ಬದಲಾಯಿಸತಕ್ಕಂಥ ಒಂದು ವ್ಯವಸ್ಥೆ ಕೂಡ ನಡೆದಿದೆ. ಆ ಜೀಪ್ ಯಾರ ಹೆಸರಿನಿಂದ ಯಾರ ಹೆಸರಿಗೆ ಬದಲಾವಣೆಯಾಗಿದೆ ಎಂದರೆ, ಆ ಮಾಹಿತಿಯನ್ನು ಕೊಡುವುದಕ್ಕೆ ಇವತ್ತು ಒತ್ತಾಯವನ್ನು ತಂದರೂ ಕೂಡ ಅದನ್ನು ಕೊಡುತ್ತಿಲ್ಲ. ಮತ್ತೆ ಅಲ್ಲಿರತಕ್ಕಂಥ ಅಪರಾಧಿಗಳು, ಅಪರಾಧಿಗಳನ್ನು ಕಣ್ಣಾರೆ ಬೆಳಿಗ್ಗೆಯಿಂದ ಸಂಜೆಯವರೆಗೆ ಪೋಲೀಸರ ಎದುರುಗಡೆಯೇ ಓಡಾಡಿಕೊಂಡಿದ್ದರೂ ಸಹ ಅವರನ್ನು ದಸ್ತಗಿರಿ ಮಾಡತಕ್ಕಂಥ ಕೆಲಸ ಸಹಾ ಸರ್ಕಾರದಿಂದ ಮಾಡಿಲ್ಲ. ಇದಕ್ಕೆ ಪ್ರಬಲವಾದಂತಹ ರಾಜಕೀಯ ಕಾರಣ ಇದೆ ರಾಜಕೀಯ ಕಾರಣದಿಂದಲೇ ಕೊಲೆ ಆಗಿದೆ. ಕೊಲೆಯಾಗಿರುವುದನ್ನು ಮುಚ್ಚಿಹಾಕುವುದು ಬಹಳ ರಾಜಕೀಯ ಪ್ರವೃತ್ತಿಯಿಂದಲೇ ನಡೆಯುತ್ತಿದೆ.

ಉಪಾದ್ಯಕ್ಷೆಯವರು : ತಾವು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದ್ದೀರಿ. ಅದನ್ನು ನೋಡೋಣ. ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ